Online Newspaper Clipping Service
**Dtd-Tuesday, 02nd, January- 2018**

**Pg.No.09**

THE TIMES OF INDIA

# Prof Dhirendra is the new UGC chairman

TIMES NEWS NETWORK

**New Delhi:** Professor Dhirendra Pal Singh took charge as chairman of the University Grants Commission on Monday for a period of five years.

Singh served as director, National Assessment and Accreditation Council for little over two years before joining UGC. The UGC chairman post had been lying vacant since April 2017 after the retirement of professor Ved Prakash.

According to the department of personnel and training order, Singh has about 34 years of professional experience in different aspects of educational planning and administration, institution building, teaching and training, research and development, international cooperation, among others. He has worked as vice-chancellor of three universities - Banaras Hindu University, Varanasi, Dr Hari Singh Gour University, Sagar and Devi Ahilya University, Indore.

Singh has contributed substantially in the fields of environmental science, vocational education and value education through various academic assignments including several publications in different forms.

As director, NAAC, Singh was instrumental in introducing steps to enhance transparency and objectivity in assessment and accreditation process, revising grading system to reflect the institutions performance levels more distinctively and strengthening global connect with Quality Assurance (QA) networks and QA bodies of different countries.

THE NEW INDIAN EXPRESS

# MEDICOS SET TO INTENSIFY STIR



EXPRESS NEWS SERVICE
@ T'Puram

THE medicos, who have been on strike since Sunday, protesting the Centre's move to table the National Medical Commission (NMC) Bill 2017 in the Rajya Sabha, will intensify it, with the Indian Medical Association (IMA) set to join it.

IMA also has called for a strike on Tuesday and observe it as a Black Day. Nearly 1,000 students from various medical colleges in the state joined the stir, which started in front of the Raj Bhavan. The slogan-shouting students also extended support to three medical students – Aswin Surjith, Ajith Paul and Geethanjali – who have started indefinite fast in front of the Raj Bhavan. IMA State president E K Ummer had inaugurated it on Sunday.

The Medicos Action Council's state leadership held a meeting with the national wing through video-conferencing and a decision was taken to strengthen the agitation.

R Sabarinathan IMA Medical Students Network state chairman told Express they were not asking for a complete withdrawal of the bill. They want the Centre to drop the clauses allowing the induction of non-elected members in the new body.

"If non-elected members get inducted, then the Central Government can easily control it. In the MCI, there were only elected members from the medical fraternity," said Sabarinathan.

He said the plan to have the bridge course will definitely dilute medical education's competence. Moreover, it will seriously affect the MBBS students' prospects of getting admitted to the PG programmes. The medicos also questioned the move to grant the private medical college managements the freedom to fix fee in 60-100 per cent seats. Sabarinathan said if shortage of doctors for rural service was being cited as the reason, then the onus is on the government to attract them by providing them with good salary and better facilities.

IMA National Medical Students coordinator Srejith N Kumar, state secretary N Sulfi and Thiruvananthapuram branch president John Panciker will join the stir on Tuesday.



Members of Medical Student Action Council protesting in front of Raj Bhavan, in Thiruvananthapuram on Monday | B P DEEPU

> If non-elected members get inducted, then the central government can easily control it. In the MCI, there were only elected members from the medical fraternity
>
> R Sabarinathan, state chairman, IMA medical students network

## Kozhikode: Two patients die, medical laxity alleged

EXPRESS NEWS SERVICE
@Kozhikode

EVEN as the strike by postgraduate medical students continued on Monday, there were allegations that two women died at the Kozhikode Medical College hospital on Sunday owing to absence of doctors to treat them.

Though no complaints have been formally lodged either at the police station or at the medical college hospital, the authorities concerned have launched an inquiry into the incident based on news reports. It was on Sunday evening that Annamma, 56, of Putha Veettil house, Sulthan Batheri, Wayanad, and Kalyani, 83, of Kakkottil, Nagaparamb, Kuttipuram, Malappuram, died at the hospital.

As per reports, relatives of the deceased had complained that the two patients did not receive treatment on time owing to doctors' strike.

However, the medical college authorities said the allegations were baseless.

Medical College principal Dr V R Rajendran said the strike has not affected the functioning of the hospital as two PG students each, who are not taking part in the strike, have been deployed in wards to ensure proper treatment to all patients.

### Private Hospitals Association backs strike

Kochi: The Kerala Private Hospitals Association has come out in support of the nationwide strike called by the IMA on Tuesday in protest against the Centre's National Medical Council Bill. The 12-hour strike will be held from 6 am to 6 pm and only emergency casualty services will be available at the hospitals at the time. "We expect the authorities to listen to our side of the matter and arrive at an unbiased decision," said Dr Varghese Cherian, president, IMA, Cochin Chapter.

### TN govt doctors to boycott work today

Chennai: Government doctors in Tamil Nadu will boycott outpatient services in hospitals across the state for an hour on Tuesday to protest the Centres National Medical Commission Bill. The protest is planned from 9.30 am to 10.30 am, an office-bearer of the Tamil Nadu Government Doctors Association (TNGDA) said. The National Medical Commission Bill to replace the Medical Council of India (MCI) with a new body, to ensure transparency, was introduced in the Lok Sabha on December 29, amid protest from Congress members. According to the Bill, the commission will have government-nominated chairman and members and board members will be selected by a search committee under the Cabinet Secretary. There will be five elected and 12 ex-officio members in the panel. TNGDA State Headquarters Secretary Dr P Balakrishnan told PTI: "The existing Medical Council of India has only medical doctors as council members and a similar model should be incorporated in the new bill as well."

THE NEW INDIAN EXPRESS



# Doctors' protest to hit pvt hospitals

## OPD services will be suspended for 12 hours to protest the National Medical Commission Bill

SUMI SUKANYA DUTTA @ New Delhi

OUT-PATIENT department (OPD) services at many private hospitals across India are likely to get affected on Tuesday as the Indian Medical Association (IMA) has called for suspending routine services for 12 hours to protest the National Medical Commission (NMC) Bill.

IMA, the largest body of healthcare professionals that represents over 2.5 lakh doctors, is opposing provisions of the NMC Bill that was tabled in Parliament last week. It seeks to replace medical education regulator Medical Council of India with a National Medical Commission.

The association members met Union Minister for Health and Family Welfare J P Nadda on Monday but called it "unfruitful".

"The government has come up with a pro-rich, anti-poor and anti-federalism Bill to govern medical education and bulldozing an 85-year-old body (MCI) without even holding proper consultations," said IMA president Ravi Wankhedkar. "We have no way but to resort to protest by deciding not to work tomorrow. If the government manages to get the Bill cleared in the House we will hit the streets as it is totally unacceptable to us in the present form."

He added that emergency services will function in hospitals.

The minister, said sources, had told the IMA members that now that the Bill is in Parliament, it was better for "country's representatives to decide its fate".

IMA, on the other hand, has been opposing the NMC bill saying it will "cripple" the functioning of medical professionals by making them completely answerable to the bureaucracy and non-medical administrators,has declared tomorrow a "Black Day".

It has also written to the Prime Minister that urging the Bill be redrafted to protect the interest of medical practitioners.

The health ministry issued an advisory asking all hospitals under the Central government to make "necessary arrangements" to ensure that emergency and healthcare service are not hit.

IMA, in particular, is opposed to the fact that the proposed 25-member Commission will be dominated by the nominated and ex-officio members as opposed to the MCI, which mostly has elected members voted by doctors. The body is also opposing the proposed licentiate or exit examination that every MBBS graduate will have to clear to get a registration number to practice or to enroll for post-graduate programmes.

The association has also raised objections to the fact that the Bill has a provision for letting private medical colleges fix their fee (government can fix fees in 40 per cent of the seats) and add new seats on their own.

It has also raised its eyebrows over the short-term Bridge Course that will allow practitioners of homeopathy and other traditional medicines to practice modern medicine, saying its like "legalising quackery".

DECCAN HERALD



# Docs' strike to hit outpatient services in govt, pvt hospitals

**BENGALURU/HUBBALLI, DHNS: Outpatient services in private and government hospitals in the state are likely to be hit on Tuesday due to the protest by doctors against the National Medical Commission (NMC) Bill.**

Routine services will be closed from six in the morning to six in the evening.

However, operation theatres, casuality and other emergency services will continue.

The NMC Bill was tabled in Parliament on Friday and seeks to replace MCI (Medical Council of India) and also allows practitioners of alternative medicines, such as homoeopathy and ayurveda, to practise allopathy after completing a "bridge course".

"We will close outpatient services to send out a message that the Bill is draconian," said Dr B Veeranna, secretary, Indian Medical Association, Bengaluru.

In Hubballi, the Hubballi unit of the IMA staged a protest before the tahsildar's office and submitted a memorandum.

IMA Hubballi unit president Dr G B Sathoora said outpatient departments will remain closed on Tuesday.

In Bengaluru, around 200 medical students under the Karnataka Medical Students and Youth Doctors Association gathered on Monday to hold a protest. The protest was staged by students from both private and government medical institutions.

"We want the central government to reconsider the National Medical Commission Bill. The amendments should be in favour of doctors," Dr Bharath Kumar, president, Karnataka Medical Students and Youth Doctors Association.

He added that the exit exam introduced in the Bill is not justified. To clear one more exam after four years of graduation is a burden on the students, he said.

Among other concerns raised by the doctors is inclusion of AYUSH (ayurveda, unani, sidda and homoepathy) under the proposed NMC. Dr Kumar said a six-month bridge course for AYUSH professionals cannot be equated to four years of medical education.

"If AYUSH is brought under NMC, anyone can take up the profession," said Dr Kumar.

He said bringing AYUSH practitioners under NMC wil spell doom for not only the modern medical profession but also the health of the public.

Dr Veeranna said appointment of members to the commission is not by election, but rather by nomination by the Union government.

**Related report on Page 7**

## Second strike

Karnataka had already witnessed closure of outpatient services opposing the state's Karnataka Private Medical Establishments Bill in November 2017, affecting hundreds of patients.

**WHAT WILL BE HIT**

Outpatient and routine services in govt, pvt hospitals from 6 am to 6 pm

**WHAT WILL FUNCTION**

Operation theatres, casuality and other emergency services

**WHY THE PROTEST**

- Doctors opposing NMC Bill which will replace Medical Council of India
- Under the Bill AYUSH docs can come under NMC after 6-month bridge course
- Doctors also oppose exit exam in the Bill

DECCAN HERALD



# Indian Medical Association calls for strike today

## Protest over replacement of Medical Council of India

**NEW DELHI, DHNS: Services in private hospitals are likely to be affected today with the Indian Medical Association (IMA) asking doctors to protest against a controversial bill that seeks to replace the 'corruption-ridden' Medical Council of India(MCI).**

"The National Medical Commission Bill (NMC) in the present form is not acceptable. It is anti-poor, anti-people, non-representative, undemocratic and anti-federal in character. The IMA declares closure of all routine services for 12 hours from 6 AM to 6 PM Tuesday across the country," newly-appointed IMA national president Dr. Ravi Wankhedkar said.

India's largest association of doctors was against the proposed law that aims to replace the MCI with the NMC under which four autonomous boards would carry out the regulatory issues dealing with undergraduate and post-graduate education; medical education infrastructure and registration of doctors and medical ethics. .

The bill was introduced in the Lok Sabha last Friday and is likely to be debated in the next four days, though some of the Opposition parties are in the favour of getting the bill reviewed again through a Parliamentary committee.

"Medical education is at the core of the access to quality healthcare, but various bottlenecks have crept into the system with serious detrimental effects on medical education, and by implication on the delivery of quality health services," the bill states in its statement of object and reason.

"The Indian Medical Council Act, 1956, which was enacted to provide a solid foundation for the growth of medical education in the early decades, has not kept pace with time," says the bill.

IMA, however, is not the only medical body opposing the bill. Alliance of Doctors for Ethical Healthcare too decries the NMC bill as a remedy to the scam-tainted MCI, because of the bureaucratic top-down structure of the proposed commission.

ವಿಜಯವಾಣಿ



## ಎನ್‌ಎಂಸಿ ವಿರೋಧಿಸಿ ದೇಶಾದ್ಯಂತ ಖಾಸಗಿ ಆಸ್ಪತ್ರೆಗಳ ಮುಷ್ಕರ ವೈದ್ಯಕೀಯ ಸೇವೆ ವ್ಯತ್ಯಯ, ಸವಾಲಿಗೆ ಸಿದ್ಧರಾದ ಸರ್ಕಾರಿ ವೈದ್ಯರು

# ಇಂದು ಒಪಿಡಿ ಬಂದ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೆಪಿಎಂಇ ಕಾಯ್ದೆ ವಿರುದ್ಧ ಸಿಡಿದೆದ್ದು ರಾಜ್ಯಾದ್ಯಂತ ವೈದ್ಯರು ನಡೆಸಿದ ನಾಲ್ಕು ದಿನಗಳ ಪ್ರತಿಭಟನೆಗೆ 60ಕ್ಕೂ ಹೆಚ್ಚು ಅಮಾಯಕ ಜೀವಗಳು ಬಲಿಯಾದ ಕರಾಳ ನೆನಪು ಮರೆಯಾಗುವ ಮುನ್ನವೇ ಖಾಸಗಿ ವೈದ್ಯರು ಮಂಗಳವಾರ ದೇಶವ್ಯಾಪಿ ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. ಭಾರತೀಯ ವೈದ್ಯಕೀಯ ಪರಿಷತ್ತಿನ(ಎಂಸಿಐ) ಬದಲಾಗಿ ರಾಷ್ಟ್ರೀಯ




ವೈದ್ಯಕೀಯ ಆಯೋಗ(ಎನ್‌ಎಂಸಿ) ಸ್ಥಾಪಿಸುವ ಕೇಂದ್ರದ ನಿರ್ಧಾರ ಖಂಡಿಸಿ ಕರೆಕೊಟ್ಟಿರುವ ಈ ಮುಷ್ಕರದಿಂದಾಗಿ ಕರ್ನಾಟಕ ಸೇರಿದಂತೆ ದೇಶದ ಒಟ್ಟಾರೆ ಖಾಸಗಿ ಆರೋಗ್ಯ ಸೇವೆ ವ್ಯತ್ಯಯವಾಗಲಿದೆ.

ಮಂಗಳವಾರ ಬೆಳಗ್ಗೆ 6ರಿಂದ ಸಂಜೆ 6ರ ವರೆಗೆ ದೇಶದ ಎಲ್ಲ ಖಾಸಗಿ ಆಸ್ಪತ್ರೆಗಳ ಹೊರರೋಗಿ ವಿಭಾಗಗಳ(ಒಪಿಡಿ) ಸೇವೆ ಸ್ಥಗಿತಗೊಳಿಸಿ ಸಾಂಕೇತಿಕ ಪ್ರತಿಭಟನೆ ನಡೆಸಲು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್(ಐಎಂಎ) ತೀರ್ಮಾನಿಸಿದೆ. ಆದರೆ ಪೂರ್ವ ನಿರ್ಧಾರಿತ ಶಸ್ತ್ರಕ್ರಿಯೆಗಳು, ತುರ್ತು ಸೇವೆ ಸೇರಿ ಅಗತ್ಯ ಆರೋಗ್ಯ ಸೇವೆಗಳಲ್ಲಿ ಯಾವುದೇ ವ್ಯತ್ಯಯವಾಗದಿರುವುದು ಕೊಂಚ ನಿರಾಳ ಮೂಡಿಸಿದೆ.

**ಸಂಧಾನ ವಿಫಲ:** ಎನ್‌ಎಂಸಿ ರಚನೆ ನಿರ್ಧಾರ ಕೈಬಿಡಲು ಸೋಮವಾರ ದೆಹಲಿಯಲ್ಲಿ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರೊಂದಿಗೆ ಖಾಸಗಿ ವೈದ್ಯರು ನಡೆಸಿದ ಸಂಧಾನ ಸಭೆ ವಿಫಲಗೊಂಡಿದೆ. ದೇಶದ ಎಲ್ಲ ಜಿಲ್ಲೆಗಳ ಜಿಲ್ಲಾಕೇಂದ್ರಗಳಲ್ಲಿ ಧರಣಿ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲು ಐಎಂಎ ನಿರ್ಣಯ ಕೈಗೊಂಡಿದೆ.

ಪುಟ 4




### ಏನಿದು ವಿವಾದ?

ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ಎನ್‌ಎಂಸಿ ಕಾಯ್ದೆ ಆರೋಗ್ಯ ಕ್ಷೇತ್ರಕ್ಕೆ ಕಂಟಕ ಎಂಬುದು ಖಾಸಗಿ ಆಸ್ಪತ್ರೆಗಳ ವಾದ. ಆದರೆ ಎಂಸಿಐನಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು ಇದರಿಂದ ಆರೋಗ್ಯ ಸಂಬಂಧಿ ಕ್ಷೇತ್ರಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ ಎಂಬ ಹಿನ್ನೆಲೆಯಲ್ಲಿ ಎನ್‌ಎಂಸಿ ರಚನೆಗೆ ನೀತಿ ಆಯೋಗ ಶಿಫಾರಸು ಮಾಡಿದೆ.

> ಸರ್ಕಾರಿ ವೈದ್ಯಕೀಯ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದು. ಮುಷ್ಕರಕ್ಕೆ ಖಾಸಗಿ ಆಸ್ಪತ್ರೆಗಳ ಪ್ರತಿಕ್ರಿಯೆ ಆಧರಿಸಿ ಮುಂದಿನ ಕ್ರಮದ ಬಗ್ಗೆ ಸಂಬಂಧಿಸಿದ ಎಲ್ಲ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು.
>
> । ಅಜಯ್ ಸೇಠ್
> ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ

### ಏನಿರುತ್ತೆ?

- ತುರ್ತು ಸೇವಾ ಚಿಕಿತ್ಸೆಗಳು
- ಐಸಿಯು, ಸಿಸಿಯು, ಒಳರೋಗಿಗಳ ವಿಭಾಗ
- ತುರ್ತು ಶಸ್ತ್ರಚಿಕಿತ್ಸೆ, ಪೂರ್ವ ನಿರ್ಧರಿತ ಶಸ್ತ್ರಚಿಕಿತ್ಸೆ

### ಏನಿರಲ್ಲ ?

- ಪ್ರಯೋಗಾಲಯ
- ಖಾಸಗಿ ಆಸ್ಪತ್ರೆ ಹೊರರೋಗಿಗಳ ವಿಭಾಗ
- ಕ್ಲಿನಿಕ್‌ಗಳು
- ವೈದ್ಯರ ಸಂದರ್ಶನ ಇತ್ಯಾದಿ

### ಇಂದು ನಿರ್ಧಾರ

ಎನ್‌ಎಂಸಿ ಜಾರಿ ವಿಚಾರ ಮಂಗಳವಾರ ಲೋಕಸಭೆಯಲ್ಲಿ ಚರ್ಚೆಗೆ ಬರಲಿದೆ. ಎನ್‌ಎಂಸಿ ವಿಧೇಯಕ ಜಾರಿಯಾದಲ್ಲಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳಲು ಐಎಂಎ ನಿರ್ಧರಿಸಿದೆ.

### 2 ತಿಂಗಳಲ್ಲಿ 2ನೇ ಸ್ಟ್ರೈಕ್

ಕೆಪಿಎಂಇ ಕಾಯ್ದೆ ವಿರೋಧಿಸಿ ವೈದ್ಯರು 2017ರ ನ.14ರಿಂದ ನಾಲ್ಕು ದಿನ ಪ್ರತಿಭಟನೆ ನಡೆಸಿದ್ದರು. ಇದರಿಂದಾಗಿ ವೈದ್ಯಕೀಯ ಸೇವೆ ವ್ಯತ್ಯಯಗೊಂಡು 60ಕ್ಕೂ ಹೆಚ್ಚು ಜನ ಚಿಕಿತ್ಸೆ ಲಭ್ಯವಾಗದೆ ಸಾವನ್ನಪ್ಪಿದ್ದರು.

### ವೈದ್ಯರ ಬೇಡಿಕೆ ಏನು? ಸರ್ಕಾರದ ನಿಲುವೇನು?

4

ವಿಜಯವಾಣಿ



# ಇಂದು ಒಪಿಡಿ ಬಂದ್

ಮೊದಲ ಪುಟದಿಂದ...

**ಪ್ರಮುಖ ಬೇಡಿಕೆ ಏನು?:** ಎಂಸಿಐ ಬದಲು ಎನ್ಎಂಸಿ ರಚನೆ ನಿರ್ಧಾರವನ್ನು ಕೈಬಿಡಬೇಕು, ಹೋಮಿಯೋಪತಿ, ಆಯುರ್ವೇದ ಹಾಗೂ ಇತರೆ ವೈದ್ಯ ಪದ್ಧತಿ ಕಲಿತವರಿಗೆ ಅಲೋಪತಿ ಚಿಕಿತ್ಸೆ ನೀಡಲು ಅಥವಾ ಔಷಧ ನೀಡಲು ಅವಕಾಶ ನೀಡಬಾರದು, ಎನ್ಎಂಸಿ ಜಾರಿಯಾದರೆ ವೈದ್ಯಕೀಯ ಕಾಲೇಜುಗಳ ಶುಲ್ಕ ನಿಗದಿಯ ಅಧಿಕಾರ ಆಯೋಗಕ್ಕೆ ಸೀಮಿತವಾಗಿರುತ್ತದೆ. ಇದರಿಂದ ವೈದ್ಯ ಶಿಕ್ಷಣ ಪಡೆಯುವುದು ಕಷ್ಟವಾಗಲಿದೆ. ಹೀಗಾಗಿ ರಾಜ್ಯ ಸರ್ಕಾರಕ್ಕೇ ಶುಲ್ಕ ನಿಗದಿ ಅವಕಾಶ ನೀಡಬೇಕು ಹಾಗೂ ರಾಜ್ಯಗಳಿಂದ ಚುನಾಯಿತ ಪ್ರತಿನಿಧಿಗಳನ್ನು ನೇಮಿಸಬೇಕು. ಅವರು ನಿರ್ಧಾರ ತೆಗೆದುಕೊಳ್ಳುವ ಸನ್ನಿವೇಶಗಳನ್ನು ಪರಿಗಣಿಸಬೇಕು.

**ಯಾರ್ಯಾರ ಬೆಂಬಲವಿಲ್ಲ:** ಎಂ.ಎಸ್.ರಾಮಯ್ಯ, ನಾರಾಯಣ ಹೃದಯಾಲಯ, ಮಣಿಪಾಲ್, ಕೆಂಪೇಗೌಡ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ (ಕಿಮ್ಸ್) ಸೇರಿ ಬಹುತೇಕ ಆಸ್ಪತ್ರೆಗಳು ಎಂದಿನಂತೆ ಸೇವೆ ಮುಂದುವರಿಸಲು ನಿರ್ಧರಿಸಿವೆ. ಆದರೆ ಕಾಯ್ದೆ ಸಂಬಂಧ ಖಾಸಗಿ ಸಂಸ್ಥೆಗಳ ನಿಲುವು ಬದಲಾಗುವ ಸಾಧ್ಯತೆಗಳೂ ಇವೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

## ಎನ್ಎಂಸಿ ಮಸೂದೆ ಅಂಶ

- ಆಯುರ್ವೇದ, ಹೋಮಿಯೋಪತಿ, ಯೋಗ ಮತ್ತು ಇತರ ವೈದ್ಯಕೀಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿರುವ ವೈದ್ಯರು ಬ್ರಿಜ್ ಕೋರ್ಸ್ ಮೂಲಕ ಆಧುನಿಕ ವೈದ್ಯಕೀಯದಲ್ಲಿ (ಅಲೋಪತಿ) ಚಿಕಿತ್ಸೆ ನೀಡಲು ಅವಕಾಶ.
- ಬ್ರಿಜ್ ಕೋರ್ಸ್ ಪಡೆದ ಆಯುಷ್ ವೈದ್ಯರ ಯಾದಿಯನ್ನು ವೈದ್ಯರ ನೀತಿಸಂಹಿತೆ ಮತ್ತು ವೈದ್ಯಕೀಯ ಮಂಡಳಿ ಕಾಪಾಡಬೇಕು.
- ವಿವಿಧ ವೈದ್ಯ ಪದ್ಧತಿಯ ಕೇಂದ್ರೀಯ ಮಂಡಳಿಗಳು ರದ್ದಾಗಿ ಏಕರೂಪದ ನಿಯಂತ್ರಣ ಸಂಸ್ಥೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅಸ್ತಿತ್ವಕ್ಕೆ.
- ವೈದ್ಯ ವೃತ್ತಿ ಕೈಗೊಳ್ಳಲು ಅಗತ್ಯವಾದ ಪ್ರಮಾಣಪತ್ರ ಪಡೆಯಬೇಕಿದ್ದರೆ ಪರೀಕ್ಷಾ ಮಂಡಳಿಯ ಪರೀಕ್ಷೆಯನ್ನೂ ಪಾಸು ಮಾಡಬೇಕು. ವೈದ್ಯಕೀಯ ಶಿಕ್ಷಣಕ್ಕೆ ಪಡೆಯಲು ಇರುವ ರಾಷ್ಟ್ರೀಯ ಅರ್ಹತೆ-ಪ್ರವೇಶ ಪರೀಕ್ಷೆ (ನೀಟ್) ಎನ್ಎಂಸಿ ಮೇಲ್ವಿಚಾರಣೆಯಲ್ಲಿ ನಡೆಯಲಿದೆ.
- ರಾಜ್ಯಗಳಲ್ಲಿ ಗೊಂದಲ ಪರಿಹಾರ ಮತ್ತು ಸಲಹೆಗಳನ್ನು ಆಲಿಸಲು ವೈದ್ಯಕೀಯ ಸಲಹಾ ಮಂಡಳಿ ರಚನೆ. ಇದು ಎನ್ಎಂಸಿಗೆ ಸಲಹೆಗಳನ್ನು ನೀಡಲಿದೆ.

## ಎಂಸಿಐನಲ್ಲಿ ಏನಿದೆ?

- ಎಲ್ಲ ರಾಜ್ಯಗಳಿಂದಲೂ ಚುನಾಯಿತ ಪ್ರತಿನಿಧಿಗಳಿರುತ್ತಾರೆ.
- ವೈದ್ಯಕೀಯ ಶಿಕ್ಷಣ ಶುಲ್ಕ ನಿಗದಿ, ಕಾಲೇಜು ನೋಂದಣಿ ಇತ್ಯಾದಿ ಅಧಿಕಾರಗಳು ಚುನಾಯಿತ ಪ್ರತಿನಿಧಿಗಳಿಗಿದೆ.
- ಎಂಸಿಐನಲ್ಲಿ ಶೇ.90 ಭಾಗ ಚುನಾಯಿತ ಪ್ರತಿನಿಧಿಗಳಿದ್ದರೆ, ಶೇ.10 ಕೇಂದ್ರ ಸರ್ಕಾರದ ನಾಮನಿರ್ದೇಶಿತ ಸದಸ್ಯರು ಇರುತ್ತಾರೆ.
- ವೈದ್ಯಕೀಯ ಕಾಲೇಜುಗಳ ಸೀಟು ಹಂಚಿಕೆಯಲ್ಲೂ ಎಂಸಿಐ ನಿರ್ಧಾರವೇ ಪ್ರಮುಖ. ಆಯಾ ರಾಜ್ಯ ಸರ್ಕಾರಕ್ಕೆ ಶೇ.80 ಶುಲ್ಕ ನಿಯಂತ್ರಿಸುವ ಹಕ್ಕು ಇದೆ. ವೈದ್ಯಕೀಯ ಕಾಲೇಜುಗಳಿಗೆ ನಿಯಂತ್ರಣ ಕಡಿಮೆ.
- ತಪ್ಪಿತಸ್ಥ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕ್ರಮ, ವಿಚಾರಣೆ ಸೇರಿ ಇನ್ನಿತರ ಅಧಿಕಾರಗಳೂ ಇವೆ.

❝ ಎನ್ಎಂಸಿ ಜಾರಿಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮವಾಗುತ್ತದೆ. ಈ ಎಲ್ಲ ವಿಚಾರವನ್ನು ಸಂಸದರಿಗೆ ಮನದಟ್ಟು ಮಾಡುವ ಕೆಲಸ ಮಾಡಲಾಗಿದೆ. ದೆಹಲಿಯಲ್ಲಿ ನಡೆದ ಸಭೆ ವಿಫಲವಾದ ಹಿನ್ನೆಲೆಯಲ್ಲಿ ಒಂದು ದಿನ ಒಪಿಡಿ ವಿಭಾಗದ ಸೇವೆ ಸ್ಥಗಿತಗೊಳಿಸಿ ಕರಾಳದಿನವನ್ನಾಗಿ ಆಚರಿಸಲಾಗುತ್ತದೆ.

। ಡಾ. ಎಸ್.ಎಸ್. ರವೀಂದ್ರ
ಐಎಂಎ ಕರ್ನಾಟಕ ವಿಭಾಗದ ಅಧ್ಯಕ್ಷ

ವಿಜಯ ಕರ್ನಾಟಕ



### ರಾಷ್ಟ್ರೀಯ ವೈದ್ಯಕೀಯ ಆಯೋಗ ವಿಧೇಯಕ ವಿರುದ್ಧ ಆಕ್ರೋಶ

### ಇಂದು ಬೆಳಗ್ಗಿನಿಂದ ಸಂಜೆವರೆಗೆ ಹೊರರೋಗಿ ವಿಭಾಗ ಬಂದ್


# ದೇಶಾದ್ಯಂತ ವೈದ್ಯ ಮುಷ್ಕರ

**ಹೊಸದಿಲ್ಲಿ:** ಕೇಂದ್ರ ಸರಕಾರ ಮಂಡಿಸಿರುವ 'ರಾಷ್ಟ್ರೀಯ ವೈದ್ಯಕೀಯ ಆಯೋಗ ವಿಧೇಯಕ-2017'ದ ವಿರುದ್ಧ ಭಾರತೀಯ ವೈದ್ಯಕೀಯ ಸಂಘ 12 ಗಂಟೆ ಕಾಲ ಹೊರರೋಗಿ ಸೇವೆ ಬಂದ್ ಕರೆ ನೀಡಿರುವುದರಿಂದ ಮಂಗಳವಾರ ದೇಶಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ವ್ಯತ್ಯಯಗೊಳ್ಳುವ ಸಾಧ್ಯತೆ ಇದೆ.

ವೈದ್ಯಕೀಯ ಶಿಕ್ಷಣ ಕ್ಷೇತ್ರ ಮತ್ತು ವೈದ್ಯ ವೃತ್ತಿಯಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಹೊಂದಿರುವ ವಿಧೇಯಕವನ್ನು ಶುಕ್ರವಾರ ಸಂಸತ್ತಿನಲ್ಲಿ ಮಂಡಿಸಲಾಗಿದ್ದು, ಮಂಗಳವಾರ ಅದು ಚರ್ಚೆಗೆ ಬರುವ ನಿರೀಕ್ಷೆ ಇದೆ.

ಹಾಲಿ ಇರುವ ಭಾರತೀಯ ವೈದ್ಯಕೀಯ ಪರಿಷತ್ (ಎಂಸಿಐ) ಅನ್ನು ವಿಸರ್ಜಿಸಿ ಅದರ ಸ್ಥಾನದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಸ್ಥಾಪಿಸುವುದು ಸೇರಿದಂತೆ ಹಲವು ಪ್ರಮುಖ ಪ್ರಸ್ತಾವನೆಗಳನ್ನು ವಿಧೇಯಕ ಹೊಂದಿದೆ. ಭಾರತೀಯ ವೈದ್ಯಕೀಯ ಸಂಘಟನೆ ಇದರ ವಿರುದ್ಧ ಧ್ವನಿ ಎತ್ತಿದ್ದು, ಲೋಕಸಭೆಯಲ್ಲಿ ಕಾಂಗ್ರೆಸ್ ಕೂಡಾ ಆಕ್ಷೇಪ ವ್ಯಕ್ತಪಡಿಸಿದೆ.

ಈ ವಿಧೇಯಕವನ್ನು ಈಗಿರುವ ಸ್ಥಿತಿಯಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದು ಬಡವರ ವಿರೋಧಿ, ಜನ ವಿರೋಧಿ, ಪ್ರಾತಿನಿಧ್ಯರಹಿತ, ಪ್ರಜಾಸತ್ತೆ ವಿರೋಧಿ ಮತ್ತು ಒಕ್ಕೂಟ ತತ್ವಗಳ ವಿರೋಧಿ ಎಂದು ಭಾರತೀಯ ವೈದ್ಯಕೀಯ ಸಂಘಟನೆ ಹೇಳಿದೆ. »05



### ವಿಧೇಯಕದ ಸಾರವೇನು?

ಪದವಿ ಶಿಕ್ಷಣ, ಸ್ನಾತಕೋತ್ತರ ಶಿಕ್ಷಣ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನ ಮತ್ತು ಮಾನ್ಯತೆ, ವೈದ್ಯರ ನೋಂದಣಿಗೆ ನಾಲ್ಕು ಸ್ವಾಯತ್ತ ಮಂಡಳಿಗಳ ಸ್ಥಾಪನೆ.

- ಹೋಮಿಯೋಪತಿ ಮತ್ತು ಆಯುರ್ವೇದ ವೈದ್ಯರೂ 1 ವರ್ಷದ ಬ್ರಿಜ್ ಕೋರ್ಸ್ ಮಾಡಿ ಅಲೋಪತಿ ಪ್ರಾಕ್ಟೀಸ್ ಮಾಡಲು ಅನುಮತಿ.
- ವೈದ್ಯಕೀಯ ಪದವಿ ಪೂರೈಸಿದವರು ಪ್ರಾಕ್ಟೀಸ್ ಲೈಸೆನ್ಸ್ ಪಡೆಯಲು ನೆಕ್ಸ್ಟ್ ಮತ್ತು ಲೈಸೆನ್ಸ್ ಪರೀಕ್ಷೆ ಎದುರಿಸಬೇಕು.
- ಸ್ನಾತಕೋತ್ತರ ಕೋರ್ಸ್ ಆರಂಭ ಅಥವಾ ಸೀಟು ಹೆಚ್ಚಳಕ್ಕೆ ಅನುಮತಿ ಬೇಕಾಗಿಲ್ಲ.
- ಆಯೋಗಕ್ಕೆ ಸರಕಾರದಿಂದಲೇ ಅಧ್ಯಕ್ಷ, ಸದಸ್ಯರ ನೇಮಕ.

### ರಾಜ್ಯದಲ್ಲೂ ಪ್ರತಿಭಟನೆ

**ಮುಷ್ಕರದ ಅವಧಿ:** ಮಂಗಳವಾರ ಬೆಳಗ್ಗೆ 6ರಿಂದ ಸಂಜೆ 6ರವರೆಗೆ

**ಯಾವ ಸೇವೆ ಇಲ್ಲ?**

- ಖಾಸಗಿ ಆಸ್ಪತ್ರೆ ಹೊರರೋಗಿ ವಿಭಾಗ
- ಕ್ಲಿನಿಕ್‌ಗಳು। ಪ್ರಯೋಗಾಲಯ

**ಯಾವುದಕ್ಕೆ ತೊಂದರೆ ಇಲ್ಲ?**

- ತುರ್ತು ಸೇವಾ ಚಿಕಿತ್ಸೆಗಳು, ಅಪಘಾತ ಚಿಕಿತ್ಸೆ
- ಐಸಿಯು, ಒಳರೋಗಿ ವಿಭಾಗ, ಡಯಾಲಿಸಿಸ್
- ತುರ್ತು, ಪೂರ್ವ ನಿರ್ಧರಿತ ಶಸ್ತ್ರಚಿಕಿತ್ಸೆ

### ಸರಕಾರಿ ಆಸ್ಪತ್ರೆ ಸೇವೆ ಅಬಾಧಿತ

ಸರಕಾರಿ ಆಸ್ಪತ್ರೆಗಳು, ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲ ಬಗೆಯ ಸೇವೆಗಳು ಎಂದಿನಂತೆ ದೊರೆಯಲಿವೆ.

**ಆಯೋಗದಿಂದ ಅಪಾಯ: ವೈದ್ಯರ ಸಂಘ** »05

ವಿಜಯ ಕರ್ನಾಟಕ



# ಆಯೋಗ ಸ್ಥಾಪನೆ ಅಪಾಯ: ವೈದ್ಯರ ಆತಂಕ

**ಬೆಂಗಳೂರು:** 1956ರಲ್ಲಿ ಸ್ಥಾಪನೆಯಾದ ವೈದ್ಯಕೀಯ ಪರಿಷತ್ ಮುಚ್ಚಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಸ್ಥಾಪನೆ ಮಾಡುವುದರಿಂದ ವೈದ್ಯಕೀಯ ಸೇವೆ ಮತ್ತು ಕ್ಷೇತ್ರಕ್ಕೆ ಅಪಾಯ ಎದುರಾಗಲಿದೆ ಎಂದು ವೈದ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

**ವೈದ್ಯ ವಿದ್ಯಾರ್ಥಿಗಳಿಗೆ ಮಾರಕ**

ಈವರೆಗೂ ಶೇ 80ರಷ್ಟು ವೈದ್ಯಕೀಯ ಸೀಟುಗಳ ಶುಲ್ಕವನ್ನು ನಿಯಂತ್ರಿಸುವ ಹಕ್ಕನ್ನು ರಾಜ್ಯ ಸರಕಾರಗಳು ಹೊಂದಿವೆ. ಆದರೆ, ಉದ್ದೇಶಿತ ಎನ್‌ಎಂಸಿ ಕಾಯಿದೆಯಲ್ಲಿ ಶೇ.40ರಷ್ಟು ಸೀಟುಗಳಿಗೆ ಮಾತ್ರ ಶುಲ್ಕ ನಿಗದಿ ಮಾಡಲು ಆಯೋಗಕ್ಕೆ ಅವಕಾಶವಿರುತ್ತದೆ. ಉಳಿದ ಶೇ. 60ರಷ್ಟು ಸೀಟುಗಳು ಶುಲ್ಕ ನಿಗದಿ ಅವಕಾಶ ಖಾಸಗಿ ಪಾಲಾಗಲಿದೆ. ಇದರಿಂದ ಸಾರ್ವಜನಿಕರು ತಮ್ಮ ಮಕ್ಕಳನ್ನು ವೈದ್ಯರನ್ನಾಗಿ ಮಾಡಬೇಕು ಎಂಬ ಕನಸಿಗೆ ಕೊಡಲಿ ಪೆಟ್ಟು ಬೀಳಲಿದೆ. ಇದಲ್ಲದೆ ಐದೂವರೆ ವರ್ಷ ವೈದ್ಯಕೀಯ ಕೋರ್ಸ್ ಮುಗಿಸಿದ ನಂತರ ಮತ್ತೊಂದು (ಎಕ್ಸಿಟ್ ಪರೀಕ್ಷೆ) ಪರೀಕ್ಷೆ ಬರೆದು ಅದರಲ್ಲಿ ಉತ್ತೀರ್ಣರಾದರೆ ಮಾತ್ರ ವೈದ್ಯ ವೃತ್ತಿ ಆರಂಭಿಸಬೇಕು ಎಂಬುದು ಹಾಸ್ಯಾಸ್ಪದ. ಇದರಿಂದ ಮುಂದಿನ ದಿನಗಳಲ್ಲಿ ಕೆಲ ದಿನಗಳು ತರಬೇತಿ ಪಡೆದ ಇತರ ವೈದ್ಯ ಪದ್ಧತಿಯವರು ಅಧಿಕೃತವಾಗಿ ಅಲೋಪತಿ ವೈದ್ಯಕೀಯ ಪದ್ಧತಿ ಅಳವಡಿಸಿಕೊಡುವ ಅವಕಾಶಗಳು ಇವೆ. ಇದರಿಂದ ವೈದ್ಯಕೀಯ ನಿರ್ಲಕ್ಷ್ಯೆಯಾಗಿ ಸಾವು ನೋವುಗಳ ಸಂಭವಿಸಬಹುದು ಎಂಬ ಐಎಂಎ ಆತಂಕ ವ್ಯಕ್ತಪಡಿಸಿದೆ.

ಕಾಯಿದೆ ಜಾರಿಯಾದಲ್ಲಿ ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಪ್ರಪಾತಕ್ಕೆ ಬೀಳುವುದಲ್ಲದೆ, ವೈದ್ಯರ ಹಾಗೂ ವೈದ್ಯ ವಿದ್ಯಾರ್ಥಿಗಳ ಆತ್ಮವಿಶ್ವಾಸ ಕುಂದಿಸಲಿದೆ. ಹೀಗಾಗಿ ಕೇಂದ್ರ ಸರಕಾರ ಎನ್‌ಎಂಸಿ ಕಾಯಿದೆ ಜಾರಿ ನಿಲುವಿನಿಂದ ಹಿಂದೆ ಸರಿಯಬೇಕು. ಇಲ್ಲವೆ, ಎಂಸಿಐನಲ್ಲಿರುವ ಕಾನೂನುಗಳನ್ನೇ ಯಥಾವತ್ ಎನ್‌ಎಂಸಿಯಲ್ಲಿ ಅಳವಡಿಸಬೇಕು. ಎಕ್ಸಿಟ್ ಪರೀಕ್ಷೆ ಕೈಬಿಡಬೇಕು, ಚುನಾಯಿತ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿಸಬೇಕು. ಬ್ರಿಜ್ ಕೋರ್ಸ್ ಮಾಡಿದವರನ್ನು ಆಯೋಗದ ವ್ಯಾಪ್ತಿಗೆ ತರಬಾರದು ಎಂದು ಐಎಂಎ ಆಗ್ರಹಿಸಿದೆ.

**ಎಂಸಿಐ-ಎನ್‌ಎಂಸಿ ನಡುವಿನ ವ್ಯತ್ಯಾಸ:** ಅಲ್ಲದೆ, ಭಾರತೀಯ ವೈದ್ಯಕೀಯ ಪರಿಷತ್ತಿನಲ್ಲಿ 107 ಮಂದಿ ಚುನಾಯಿತರು ಸೇರಿದಂತೆ ಒಟ್ಟು 125 ಸದಸ್ಯರಿದ್ದಾರೆ. ಆದರೆ, ರಾಷ್ಟ್ರೀಯ ವೈದ್ಯಕೀಯ ಆಯೋಗದಲ್ಲಿ ಕೇವಲ ಐದು ಮಂದಿ ಚುನಾಯಿತ ಸದಸ್ಯರು ಹಾಗೂ 59 ಮಂದಿ ನಾಮನಿರ್ದೇಶಿತ ಸದಸ್ಯರಿರುತ್ತಾರೆ. ಈ ನಾಮ ನಿರ್ದೇಶಿತ ಸದಸ್ಯರು ಸರಕಾರದ ನಿರ್ಧಾರ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಇದರಿಂದ ಜನಸಾಮಾನ್ಯರಿಗೆ ತೊಂದರೆಯಾಗುವಂತಹ ಅನೇಕ ಆದೇಶಗಳು ಜಾರಿಯಾಗುವ ಸಾಧ್ಯತೆ ಇರುತ್ತದೆ.

ಎನ್‌ಎಂಸಿ ಜಾರಿ ಸಂಬಂಧ ಮಂಗಳವಾರ ಲೋಕಸಭೆಯಲ್ಲಿ ಚರ್ಚೆ ನಡೆಯಲಿದ್ದು, ವಿಧೇಯಕ ಜಾರಿಯಾದಲ್ಲಿ ಮುಂದಿನ ಹೋರಾಟದ ಬಗ್ಗೆ ಎಲ್ಲ ರಾಜ್ಯಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು.
**- ಡಾ. ಎಚ್.ಎನ್. ರವೀಂದ್ರ,** ಅಧ್ಯಕ್ಷ, ಐಎಂಎ ರಾಜ್ಯ ಶಾಖೆ

## ಪ್ರಮುಖ ಬೇಡಿಕೆಗಳು

- ಎಂಸಿಐ ಮುಚ್ಚಿ ಎನ್‌ಎಂಸಿ ರಚನೆ ಮಾಡುವ ನಿರ್ಧಾರ ಕೈಬಿಡಬೇಕು
- ಎಂಸಿಐ ಕಾಯಿದೆಯಲ್ಲಿಯೇ ತಿದ್ದುಪಡಿ ತರಬೇಕು
- ಎನ್‌ಎಂಸಿ ರಚಿಸುವುದೇ ಆದರೆ ಎಂಸಿಐನಲ್ಲಿರುವ ಕಾಯಿದೆಗಳನ್ನೇ ಯಥಾವತ್ ಅಳವಡಿಸಬೇಕು
- ಹೋಮಿಯೋಪತಿ, ಆಯುರ್ವೇದ ಸೇರಿ ಇತರ ವೈದ್ಯ ಪದ್ಧತಿ ಕಲಿತವರಿಗೆ ಅಲೋಪತಿ ಅಭ್ಯಾಸ ಮಾಡಲು, ಔಷಧ ನೀಡಲು ಅವಕಾಶ ವಿಲ್ಲ.

## ದೇಶಾದ್ಯಂತ...

» ಮೊದಲ ಪುಟದಿಂದ

**ಮಾತುಕತೆ ವಿಫಲ:** ಸೋಮವಾರ ದಿಲ್ಲಿಯಲ್ಲಿ ಐಎಂಎ ಸದಸ್ಯರು ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಿ ವಿಧೇಯಕದ ಅಂಶಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಐಎಂಎ ಮಾಜಿ ಅಧ್ಯಕ್ಷ ಕೆ.ಕೆ. ಅಗರ್ವಾಲ್ ಅವರು ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ವೈದ್ಯರ ಹಿತಾಸಕ್ತಿ ರಕ್ಷಣೆಗೆ ಮನವಿ ಮಾಡಿದ್ದಾರೆ. ಆದರೆ, ನಡ್ಡಾ ಜತೆಗಿನ ಮಾತುಕತೆ ಫಲಪ್ರದವಾಗದ ಹಿನ್ನೆಲೆಯಲ್ಲಿ ಹೊರರೋಗಿ ವಿಭಾಗ ಬಂದ್ ಮಾಡುವ ಪೂರ್ವ ನಿರ್ಧಾರವನ್ನು ಮುಂದುವರಿಸಲಾಗಿದೆ. ದೇಶದ ಬಹುತೇಕ ಎಲ್ಲ ರಾಜ್ಯಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದು, ಕೆಲವು ಕಡೆ ಒಂದೆರಡು ಗಂಟೆಗಳ ಸಾಂಕೇತಿಕ ಪ್ರತಿಭಟನೆ ನಡೆಯಲಿದೆ.

**ವಿಧೇಯಕದ ಮೂಲ ಎಲ್ಲಿ?** ಭಾರತೀಯ ವೈದ್ಯಕೀಯ ಶಿಕ್ಷಣ ಪರಿಷತ್‌ನ ಮಾಜಿ ಅಧ್ಯಕ್ಷ ಡಾ. ಕೇತನ್ * ದೇಸಾಯಿ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಅಮಾನತುಗೊಂಡ ಬಳಿಕ ನೀತಿ ಆಯೋಗ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಹಾಗೂ ವೈದ್ಯ ವೃತ್ತಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ಪ್ರತಿಪಾದಿಸಿತ್ತು.

ದೇಶಾದ್ಯಂತ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ದೇಶಾದ್ಯಂತ ಎಲ್ಲ ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿ ವಿಭಾಗ ಮುಚ್ಚಲು ಸೂಚಿಸಲಾಗಿದೆ.
**- ಡಾ. ರವಿ ವಾಂಖೇಡ್ಕರ್**, ಐಎಂಎ ರಾಷ್ಟ್ರೀಯ ಅಧ್ಯಕ್ಷ

ಪ್ರಜಾವಾಣಿ

ವೈದ್ಯಕೀಯ ಆಯೋಗ ಸ್ಥಾಪನೆಗೆ ವಿರೋಧ: ಕಪ್ಪುದಿನ ಆಚರಣೆ ಇಂದು

# ಖಾಸಗಿ ಆಸ್ಪತ್ರೆ ಒಪಿಡಿ ಬಂದ್

## ಬೆಳಿಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ಸೇವೆ ಇಲ್ಲ: ತುರ್ತು ಚಿಕಿತ್ಸೆ ಲಭ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಸ್ಥಾಪನೆ ವಿರೋಧಿಸಿ ಭಾರತೀಯ ವೈದ್ಯಕೀಯ ಸಂಘ(ಐಎಂಎ) ಮಂಗಳವಾರ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

ಮುಷ್ಕರ ಬೆಂಬಲಿಸಿ ರಾಜ್ಯದಲ್ಲಿರುವ ಸುಮಾರು 15 ಸಾವಿರ ಖಾಸಗಿ ಆಸ್ಪತ್ರೆಗಳ ಹೊರ ರೋಗಿ ಚಿಕಿತ್ಸಾ ವಿಭಾಗ ಬಂದ್ ಮಾಡಲು ಐಎಂಎ ಕರ್ನಾಟಕ ಶಾಖೆ ನಿರ್ಧರಿಸಿದೆ.

ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಹೊರರೋಗಿ ಚಿಕಿತ್ಸಾ ವಿಭಾಗ (ಒಪಿಡಿ) ಕಾರ್ಯನಿರ್ವಹಿಸುವುದಿಲ್ಲ. ಆದರೆ, ತುರ್ತು ಚಿಕಿತ್ಸಾ ಸೌಲಭ್ಯ, ಔಷಧಿ ಅಂಗಡಿಗಳು ಮತ್ತು ಒಳರೋಗಿ ವಿಭಾಗ ಎಂದಿನಂತೆ ಕಾರ್ಯ ನಿರ್ವಹಿಸಲಿವೆ.

ಒಂದು ದಿನದ ಮುಷ್ಕರದಲ್ಲಿ ದೇಶದ ಎಲ್ಲ ಖಾಸಗಿ ಆಸ್ಪತ್ರೆಯ ವೈದ್ಯರು ಪಾಲ್ಗೊಳ್ಳಲಿದ್ದು, ಆರೋಗ್ಯ ಸೇವೆ ಸ್ಥಗಿತಗೊಳಿಸಲಾಗುವುದು ಎಂದು ಐಎಂಎ ರಾಷ್ಟ್ರೀಯ ಅಧ್ಯಕ್ಷ ಡಾ. ರವಿ ವಾಂಖೇಡ್ಕರ್ ಹೇಳಿದ್ದಾರೆ.

ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ವೈದ್ಯರು ಜಿಲ್ಲಾಧಿಕಾರಿ ಕಚೇರಿಗಳಿಗೆ ತೆರಳಿ ಮನವಿ ಸಲ್ಲಿಸಲಿದ್ದಾರೆ ಎಂದು ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ. ರವೀಂದ್ರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲೂ ಆಸ್ಪತ್ರೆಗಳು ಬಂದ್ ಆಗಲಿವೆ. ಪ್ರತಿಭಟನೆ ನಡೆಸುವ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ ಎಂದು ಐಎಂಎ ಬೆಂಗಳೂರು ಶಾಖೆ ಅಧ್ಯಕ್ಷ ಡಾ. ಎಸ್. ಶ್ರೀನಿವಾಸ್ ಸ್ಪಷ್ಟಪಡಿಸಿದ್ದಾರೆ.

**ಮಸೂದೆಗೆ ವಿರೋಧ:** ಭಾರತೀಯ ವೈದ್ಯಕೀಯ ಮಂಡಳಿಯ(ಎಂಸಿಐ) ಜಾಗದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಸ್ಥಾಪಿಸುವ ಮಸೂದೆಯನ್ನು ಐಎಂಎ ತೀವ್ರವಾಗಿ ವಿರೋಧಿಸಿದೆ.

ಕಳೆದ ಶುಕ್ರವಾರ ಲೋಕಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಲಾಗಿದ್ದು, ಮುಂದಿನ ನಾಲ್ಕು ದಿನ ಸಂಸತ್‌ನಲ್ಲಿ ಮಸೂದೆ ಮೇಲೆ ಚರ್ಚೆ ನಡೆಯುವ ಸಾಧ್ಯತೆ ಇದೆ.

ಈ ಮಸೂದೆಯನ್ನು ಮತ್ತೊಮ್ಮೆ ಪರಿಶೀಲನೆಗಾಗಿ ಸಂಸದೀಯ ಸಮಿತಿಗೆ ಕಳುಹಿಸಬೇಕು ಎಂಬ ನಿಲುವನ್ನು ವಿರೋಧ ಪಕ್ಷಗಳ ಕೆಲವು ಸದಸ್ಯರು ಹೊಂದಿದ್ದಾರೆ.

### ಮಸೂದೆಗೆ ವೈದ್ಯರ ವಿರೋಧ ಯಾಕೆ?

- ಭಾರತೀಯ ವೈದ್ಯಕೀಯ ಮಂಡಳಿ ಮುಚ್ಚಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಸ್ಥಾಪಿಸಲು ಹೊರಟಿರುವುದಕ್ಕೆ ಆಕ್ಷೇಪ
- ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಶೇ ೮೦ರಷ್ಟು ಸೀಟುಗಳ ಶುಲ್ಕ ನಿಯಂತ್ರಿಸುವ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿದೆ
- ವೈದ್ಯಕೀಯ ಆಯೋಗ ಸ್ಥಾಪನೆಯಾದರೆ ಶೇ ೬೦ರಷ್ಟು ಸೀಟುಗಳ ಶುಲ್ಕ ನಿಗದಿ ಅಧಿಕಾರ ಕಾಲೇಜುಗಳಿಗೆ ಸಿಗಲಿದೆ.
- ಮಕ್ಕಳನ್ನು ವೈದ್ಯರನ್ನಾಗಿ ಮಾಡಬೇಕೆಂಬ ಪೋಷಕರ ಆಸೆಗೆ ಪೆಟ್ಟು ಬೀಳಲಿದೆ
- ಕೆಲವೇ ದಿನಗಳ ತರಬೇತಿ ಪಡೆದ ಇತರೆ ಪದ್ಧತಿಯ ವೈದ್ಯರು ಕೂಡ ಅಧಿಕೃತವಾಗಿ ಅಲೋಪತಿ ವೈದ್ಯಕೀಯ ಪದ್ಧತಿ ಅಳವಡಿಸಿಕೊಳ್ಳಲು ಅವಕಾಶ ಆಗಲಿದೆ.
- ಇದು ಅಪಾಯಕಾರಿ ಬೆಳವಣಿಗೆಯಾಗಿದ್ದು, ರೋಗಿಗಳ ಸಾವಿನ ಸಂಖ್ಯೆ ಹೆಚ್ಚಾಗಲಿದೆ

### ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಸೂಚನೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಎಲ್ಲ ರೋಗಿಗಳಿಗೂ ಚಿಕಿತ್ಸೆ ನೀಡಲು ಸೂಚನೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ನಿರ್ದೇಶಕ ಡಾ. ನಟರಾಜ್ ತಿಳಿಸಿದರು.

'ಖಾಸಗಿ ಆಸ್ಪತ್ರೆಗಳು ಹೊರ ರೋಗಿ ವಿಭಾಗ ಬಂದ್ ಮಾಡುತ್ತಿರುವ ಮಾಹಿತಿ ಅಧಿಕೃತವಾಗಿ ಸಿಕ್ಕಿಲ್ಲ. ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಬಂದ್ ಆದರೂ ರೋಗಿಗಳಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸುತ್ತೇವೆ' ಎಂದರು.

ಕನ್ನಡಪ್ರಭ



## ಇಂದು ದೇಶಾದ್ಯಂತ ಖಾಸಗಿ ಆಸ್ಪತ್ರೆ ಒಪಿಡಿ ಬಂದ್

# ಮತ್ತೆ ವೈದ್ಯ ಮುಷ್ಕರ

### ವೈದ್ಯ ಆಯೋಗ ಮಸೂದೆಗೆ ವಿರೋಧಿಸಿ ವೈದ್ಯರಿಂದ ಪ್ರತಿಭಟನೆ

### ಬೆಳಗ್ಗೆ 6ರಿಂದ 12 ತಾಸು ಮುಷ್ಕರ | ತುರ್ತು ವೈದ್ಯಸೇವೆ ಅಬಾಧಿತ

ನವದೆಹಲಿ: ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ರದ್ದು ಮಾಡಿ ಅದರ ಬದಲು ರಾಷ್ಟ್ರೀಯ ವೈದ್ಯ ಆಯೋಗ (ಎನ್ಎಂಸಿ) ರಚಿಸುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರದ 'ರಾಷ್ಟ್ರೀಯ ವೈದ್ಯ ಆಯೋಗ ಮಸೂದೆ-2017'ನ್ನು ವಿರೋಧಿಸಿ ಮಂಗಳವಾರ ದೇಶಾದ್ಯಂತ ಹೊರ ರೋಗಿಗಳ ವಿಭಾಗವನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಲು ವೈದ್ಯರು ನಿರ್ಧರಿಸಿದ್ದಾರೆ. ಭಾರತೀಯ ವೈದ್ಯಕೀಯ ಸಂಘ (ಐಎಂಎ) ಈ ಬಂದ್‌ಗೆ ಕರೆ ನೀಡಿದೆ. ಎಂಸಿಐ ಎದಲ್ಲಿ 2.77 ಲಕ್ಷ ವೈದ್ಯ ಸದಸ್ಯರಿದ್ದಾರೆ.

ಬೆಳಗ್ಗೆ 6ರಿಂದ ಸಂಜೆ 6ರವರೆಗೆ 12 ತಾಸುಗಳ ಮುಷ್ಕರಕ್ಕೆ ಐಎಂಎ ಕರೆ ನೀಡಿದ್ದು, ಖಾಸಗಿ ಆಸ್ಪತ್ರೆಗಳ ಹೊರರೋಗಿಗಳ ವಿಭಾಗ (ಒಪಿಡಿ) ಬಂದ್ ಆಗಲಿವೆ. ಆದರೆ ತುರ್ತು ವಿಭಾಗಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಕಳೆದ ಶುಕ್ರವಾರವೇ ಮಸೂದೆ ಲೋಕಸಭೆಯಲ್ಲಿ ಮಂಡನೆಯಾಗಿದ್ದು, ಮಂಗಳವಾರ ಚರ್ಚೆಗೆ ಬರುವ ನಿರೀಕ್ಷೆಯಿದೆ. ಈ ವಿಧೇಯಕದ ಅನುಸಾರ ಭ್ರಷ್ಟಾಚಾರದ ಆರೋಪ ಹೊತ್ತಿರುವ ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ರದ್ದಾಗಲಿದ್ದು, ಆ ಜಾಗಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್ಎಂಸಿ) ಅಸ್ತಿತ್ವಕ್ಕೆ ಬರಲಿದೆ.

➘ 5


### ಯಾಕೆ ಪ್ರತಿಭಟನೆ?

1 ಕೇಂದ್ರ ಸರ್ಕಾರ ರಾಷ್ಟ್ರೀಯ ವೈದ್ಯ ಆಯೋಗ ಮಸೂದೆ-2017 ಜಾರಿಗೆ ಸಿದ್ಧತೆ ನಡೆಸಿದೆ. ಇದು ಜಾರಿಯಾದರೆ, ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ರದ್ದಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್ಎಂಸಿ) ಅಸ್ತಿತ್ವಕ್ಕೆ ಬರುತ್ತದೆ.

2 ಎನ್ಎಂಸಿಯಲ್ಲಿ ಸರ್ಕಾರದ ನಾಮ ನಿರ್ದೇಶಿತರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ವೈದ್ಯರ ಪ್ರಾತಿನಿಧಿಕ ಸಂಸ್ಥೆಯ ಮೇಲೆ ವೈದ್ಯರ ಹಿಡಿತ ತಪ್ಪುತ್ತದೆ. ವೈದ್ಯರು ಅಧಿಕಾರಿಶಾಹಿಯ ಮುಂದೆ ಮಂಡಿಯೂರುವ ಪರಿಸ್ಥಿತಿ ಬರುತ್ತದೆ ಎಂಬುದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಆರೋಪ

3 ಇದಲ್ಲದೆ, ಆಯುಷ್ ವೈದ್ಯರಿಗೆ 'ಬ್ರಿಜ್ ಕೋರ್ಸ್' ಮಾಡಿದರೆ ಅಲೋಪತಿ ವೈದ್ಯಕೀಯ ಪದ್ಧತಿ ಅನುಸರಿಸಲು ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಹೀಗೆ ಮಾಡುವುದರಿಂದ ನಕಲಿ ವೈದ್ಯರಿಗೂ ವೈದ್ಯಕೀಯ ಸೇವೆ ನೀಡಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ ಎಂಬುದು ಐಎಂಎ ವಾದ.

### ಮುಷ್ಕರಕ್ಕೆ ಕೋರ್ಟ್ ಸೂಚನೆ ಅಡ್ಡಿ ಇಲ್ಲ



ಕೇಂದ್ರ ಸಚಿವರ ಜತೆ ಮಾತುಕತೆ ವಿಫಲವಾದ ಕಾರಣ ಒಪಿಡಿ ಬಂದ್‌ಗೆ ಕರೆ ನೀಡಿದ್ದೇವೆ. ಸರ್ಕಾರ ಮಸೂದೆ ಮಂಡಿಸುವ ಬದಲು ಸೆಲೆಕ್ಟ್ ಕಮಿಟಿಗೆ ಶಿಫಾರಸು ಮಾಡಿದರೂ ನಾವು ಮುಷ್ಕರ ಹಿಂಪಡೆಯುತ್ತೇವೆ. ಅಲ್ಲದೆ, ನಾವು ಯಾವ ಆಸ್ಪತ್ರೆಗೂ ಬಂದ್ ಮಾಡುವಂತೆ ಒತ್ತಡ ಹೇರುತ್ತಿಲ್ಲ, ಆದರೂ, ಎಲ್ಲ ಆಸ್ಪತ್ರೆಗಳೂ ಮುಷ್ಕರದಲ್ಲಿ ಪಾಲ್ಗೊಳ್ಳಲಿವೆ. ಕರ್ನಾಟಕ ಹೈಕೋರ್ಟ್ ಹಿಂದೆ ನೀಡಿದ್ದ ಸೂಚನೆ ಈ ಮುಷ್ಕರಕ್ಕೆ ಅನ್ವಯಿಸುವುದಿಲ್ಲ, ಅಷ್ಟಕ್ಕೂ ಕರ್ನಾಟಕದಲ್ಲಿ ಖಾಸಗಿ ಆಸ್ಪತ್ರೆ ನಿಯಂತ್ರಣ ಮಸೂದೆ ವಿರುದ್ಧ ಹೋರಾಟ ನಡೆದಾಗ ರೋಗಿಗಳ ಸಮಸ್ಯೆ ಗಣನೆಗೆ ತೆಗೆದುಕೊಂಡು ವ್ಯವಹರಿಸಿ ಎಂದಷ್ಟೇ ಹೈಕೋರ್ಟ್ ಹೇಳಿತ್ತು.

• ಡಾ|ಎಚ್.ಎನ್.ರವೀಂದ್ರ
ಐಎಂಎ ರಾಜ್ಯಾಧ್ಯಕ್ಷ

# ರಾಜ್ಯದಲ್ಲೂ ಇಂದು ಒಪಿಡಿ ಬಂದ್

## ಎನ್‌ಎಂಸಿ ತಿದ್ದುಪಡಿ ಕಾಯ್ದೆಗೆ ವಿರೋಧ | ಆದರೆ ಬಂದ್‌ಗೆ ಹಲವು ಆಸ್ಪತ್ರೆಗಳ ಬೆಂಬಲವಿಲ್ಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರವು ಸಂಸತ್‌ನಲ್ಲಿ ಮಂಡಿಸಲು ಸಿದ್ಧತೆ ನಡೆಸಿರುವ 'ನ್ಯಾಷನಲ್ ಮೆಡಿಕಲ್ ಕಮಿಷನ್ (ಎನ್‌ಎಂಸಿ) ತಿದ್ದುಪಡಿ ವಿಧೇಯಕ' ವಿರೋಧಿಸಿ ಭಾರತೀಯ ವೈದ್ಯಕೀಯ ಸಂಘವು ದೇಶಾದ್ಯಂತ ಜ.2ರಂದು ಕರಾಳದಿನ ಆಚರಣೆಗೆ ಕರೆ ನೀಡಿದೆ. ಹೀಗಾಗಿ ಜ.2ರಂದು ಮಂಗಳವಾರ ಬೆಂಗಳೂರು ನಗರ ಸೇರಿದಂತೆ ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳ ಹೊರ ರೋಗಿಗಳ ಸೇವೆ ಬಂದ್ ಆಗಲಿದೆ.

ಎಲ್ಲಾ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ, ಕ್ಲಿನಿಕ್‌ಗಳಲ್ಲಿ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಹೊರ ರೋಗಿಗಳ ಸೇವೆಯನ್ನು (ಒಪಿಡಿ) ಸ್ಥಗಿತಗೊಳಿಸುವಂತೆ ಭಾರತೀಯ ವೈದ್ಯ ಸಂಘ ಕರೆ ನೀಡಿದೆ. ಹೀಗಾಗಿ ರಾಜ್ಯದ ಖಾಸಗಿ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳ ಮತ್ತು ಪ್ರಯೋಗಾಲಯಗಳ ವೈದ್ಯಕೀಯ ಸೇವೆಗಳಲ್ಲಿ ವ್ಯತ್ಯಯವಾಗಲಿದೆ. ಆದರೆ ಎಂ.ಎಸ್.ರಾಮಯ್ಯ, ನಾರಾಯಣ ಹೃದಯಾಲಯ, ಮಣಿಪಾಲ್, ಕೆಂಪೇಗೌಡ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ (ಕಿಮ್ಸ್) ಸೇರಿದಂತೆ ಬಹುತೇಕ ಆಸ್ಪತ್ರೆಗಳು ಎಂದಿನಂತೆ ಸೇವೆ ಮುಂದುವರೆಸಲು ನಿರ್ಧರಿಸಿವೆ ಎಂದು ತಿಳಿದುಬಂದಿದೆ.

## ಕೋರ್ಟ್ ಒಪಿಡಿ ಬಂದ್ ಮಾಡಬೇಡಿ ಎಂದಿಲ್ಲ

ನ್ಯಾಯಾಲಯವು ಒಪಿಡಿ ಬಂದ್ ಮಾಡಿ ಪ್ರತಿಭಟನೆ ನಡೆಸಬೇಡಿ ಎಂದು ನಿರ್ದೇಶಿಸಿಲ್ಲ. ಹೀಗಾಗಿ 'ನ್ಯಾಷನಲ್ ಮೆಡಿಕಲ್ ಕಮಿಷನ್ (ಎನ್‌ಎಂಸಿ) ತಿದ್ದುಪಡಿ ವಿಧೇಯಕ' ವಿರೋಧಿಸಿ ಜ.2ರಂದು ಒಪಿಡಿ ಬಂದ್‌ಗೆ ಕರೆ ನೀಡಿದ್ದೇವೆ ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ರಾಜ್ಯಾಧ್ಯಕ್ಷ ಡಾ. ಎಚ್.ಎನ್. ರವೀಂದ್ರ ಹೇಳಿದ್ದಾರೆ. ಕೆಪಿಎಂಇ ಕಾಯ್ದೆ ವಿಚಾರವಾಗಿ ಆಸ್ಪತ್ರೆಗಳು ಸಂಪೂರ್ಣ ಬಂದ್‌ನಲ್ಲಿ ಭಾಗವಹಿಸಿದ್ದರಿಂದ ತೀವ್ರ ಸಮಸ್ಯೆ ಉಂಟಾಗಿತ್ತು. ಹೀಗಾಗಿ ಹೈಕೋರ್ಟ್ ಸಮಸ್ಯೆ ಗಣನೆಗೆ ತೆಗೆದುಕೊಂಡು ವ್ಯವಹರಿಸಿ ಎಂದು ಹೇಳಿತ್ತೇ ಹೊರತು ಇನ್ನು ಮುಂದೆ ಪ್ರತಿಭಟನೆ ಹಾಗೂ ಒಪಿಡಿ ಬಂದ್ ಮಾಡುವಂತಿಲ್ಲ ಎಂದು ಹೇಳಿರಲಿಲ್ಲ. ಇದಲ್ಲದೆ ಜ.2ರಂದು ಒಪಿಡಿ ಬಂದ್ ಮಾಡುವಂತೆ ಐಎಂಎ ರಾಷ್ಟ್ರ ಮಟ್ಟದಲ್ಲಿ ಕರೆ ನೀಡಿದೆ. ನ್ಯಾಯಾಲಯದ ಸಲಹೆಯು ಎನ್‌ಎಂಸಿ ವಿರುದ್ಧದ ಹೋರಾಟಕ್ಕೆ ಅನ್ವಯಿಸುವುದಿಲ್ಲ ಎಂದು 'ಕನ್ನಡಪ್ರಭಕ್ಕೆ' ತಿಳಿಸಿದ್ದಾರೆ.

## ಮತ್ತೆ ವೈದ್ಯ ಮುಷ್ಕರ

ಮೊದಲ ಪುಟದಿಂದ

'ಎನ್‌ಎಂಸಿಯಲ್ಲಿ ವೈದ್ಯಕೀಯ ಚಟುವಟಿಕೆಯ ಗಂಧಗಾಳಿ ಇಲ್ಲದ ಅಧಿಕಾರಿಗಳು ಇರಲಿದ್ದು, ವೈದ್ಯರು ಇವರಿಗೆ ಉತ್ತರದಾಯಿಗಳಾಗಿ ಮಂಡಿಯೂರಿ ನಿಲ್ಲಬೇಕಾಗುತ್ತದೆ. ಇದು ಒಕ್ಕೂಟ ವ್ಯವಸ್ಥೆಗೆ ಹಾಗೂ ಬಡವರಿಗೆ ವಿರುದ್ಧವಾದ ವಿಧೇಯಕ. ಹೀಗಾಗಿ ಮಸೂದೆಗೆ ವಿರೋಧವಿದೆ' ಎಂದು ಐಎಂಎ ಹೇಳಿದೆ. ಇದೇ ವೇಳೆ, ಆಯುರ್ವೇದ, ಹೋಮಿಯೋಪತಿಯಂಥ ಕೋರ್ಸ್‌ಗಳನ್ನು ಮಾಡಿದ ವೈದ್ಯರು ಸಮಾನಾಂತರ ಕೋರ್ಸೊಂದನ್ನು ಮಾಡು ಅಲೋಪತಿ ವೈದ್ಯ ವಿಧಾನವನ್ನು ಪ್ರ್ಯಾಕ್ಟೀಸ್ ಮಾಡಲು ವಿಧೇಯಕ ಅವಕಾಶ ಕಲ್ಪಿಸುತ್ತದೆ.

ಕೋಲಾರಪತ್ರಿಕೆ



# ಕ್ರೀಡೆಯು ದೈಹಿಕವಾಗಿ ಸಬಲರನ್ನಾಗಿ ಮಾಡುವುದಲ್ಲದೆ ಮಾನಸಿಕವಾಗಿ ಸಬಲಗೊಳಿಸುತ್ತದೆ : ಡಾ.ರಘುವೀರ



ಸಂಯುಕ್ತ ಕರ್ನಾಟಕ



ULRC SDUAHER

# ಇಂದು ಒಪಿಡಿ ಸೇವೆ ಬಂದ್

## ಆಯೋಗ ರಚನೆಗೆ ವೈದ್ಯರ ವಿರೋಧ

**ಬೆಂಗಳೂರು:** ರಾಷ್ಟ್ರೀಯ ವೈದ್ಯಕೀಯ ಆಯೋಗ ರಚನೆ ವಿರೋಧಿಸಿ ದೇಶದಾದ್ಯಂತ ಖಾಸಗಿ ಆಸ್ಪತ್ರೆಗಳ ವೈದ್ಯರು ಜ.2ರಂದು ಮಂಗಳವಾರ 'ಒಪಿಡಿ' ಸೇವೆ ಸ್ಥಗಿತಗೊಳಿಸಲು ನಿರ್ಧರಿಸಿದ್ದಾರೆ.

ಕೇಂದ್ರ ಸರ್ಕಾರವು ನೀತಿ ಆಯೋಗದ ಶಿಫಾರಸ್ಸಿನಂತೆ ಈಗಿರುವ 'ರಾಷ್ಟ್ರೀಯ ವೈದ್ಯಕೀಯ ಮಂಡಳಿ' ಬದಲಿಗೆ 'ರಾಷ್ಟ್ರೀಯ ವೈದ್ಯಕೀಯ ಆಯೋಗ' ರಚಿಸಲು ಮುಂದಾಗಿದೆ. ಈ ಕುರಿತಂತೆ ಪ್ರಸಕ್ತ ಸಂಸತ್ ಅಧಿವೇಶನದಲ್ಲಿ ಮಸೂದೆ ಮಂಡಿಸಲು ನಿರ್ಧರಿಸಿದೆ. ನೂತನ ಮಸೂದೆಯು ಅಲೋಪಥಿಕ್ ವೈದ್ಯಕೀಯ ಸೇವೆ ಮೇಲೆ ಭಾರೀ ಪರಿಣಾಮ ಬೀರಲಿದೆ. ಮಸೂದೆಯಿಯು ಕೆಲವೊಂದಿಷ್ಟು ತರಬೇತಿ ನೀಡಿ 'ಆಯುಷ್ ಮಂಡಳಿ' ವ್ಯಾಪ್ತಿಗೆ ಒಳಪಡುವ ಆಯುರ್ವೇದಿಕ್, ಹೋಮಿಯೋಪಥಿಕ್, ಯುನಾನಿ, ಪಾರಂಪರಿಕ ವೈದ್ಯರಿಗೆ ಅಲೋಪಥಿಕ್ ಔಷಧಿ ಶಿಫಾರಸ್ಸು ಮಾಡಲು ಅವಕಾಶ ಕಲ್ಪಿಸಲಿದೆ.

ಕೇಂದ್ರ ಸರ್ಕಾರದ ಧೋರಣೆಯು ವೃತ್ತಿಪರ ವೈದ್ಯಕೀಯ ಪದವೀಧರರಿಗೆ ಆತಂಕ ತಂದೊಡ್ಡಿದೆ. ಈ ಹಿನ್ನೆಲೆಯಲ್ಲಿ ಕಪ್ಪು ದಿನವನ್ನಾಗಿ ಆಚರಿಸಲು ಖಾಸಗಿ ಆಸ್ಪತ್ರೆಗಳ ವೈದ್ಯರು ನಿರ್ಧರಿಸಿ, ಒಪಿಡಿ ಸೇವೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ.

**ಖಂಡನೆ**

ಕೇಂದ್ರ ಸರ್ಕಾರದ ಧೋರಣೆ ಖಂಡಿಸಿರುವ ಭಾರತೀಯ ವೈದ್ಯಕೀಯ ಸಂಘವು, ಈಗಿರುವ ಮಂಡಳಿಯನ್ನು ರದ್ದುಪಡಿಸಿ ಆಯೋಗ ರಚನೆಗೆ ಮುಂದಾಗಿರುವುದು ಸರಿಯಲ್ಲ. ಆಯೋಗ ರಚನೆಯಿಂದಾಗಿ ವೈದ್ಯಕೀಯ ಶಿಕ್ಷಣ ಮತ್ತಷ್ಟು ದುಬಾರಿ ಆಗುವುದಲ್ಲದೆಯೇ ಮಧ್ಯಮ, ಕೆಳವರ್ಗದ ಜನ ವೈದ್ಯಕೀಯ ಪದವಿ ಪಡೆಯುವುದು ಗಗನಕುಸುಮ ಎಂಬಂತಾಗುತ್ತದೆ. ಪ್ರಸ್ತುತ ಸ್ಥಿತಿಯಲ್ಲಿ ರಾಜ್ಯಗಳಿಗೆ ಶೇ.80ರಷ್ಟು ಸೀಟು ಹಂಚಿಕೆ ಮಾಡಲಾಗಿದೆ. ಆಯೋಗ ರಚನೆಯಾದಲ್ಲಿ ಶೇ.40ರಷ್ಟು ಸೀಟು ಮಾತ್ರ ದಕ್ಕಲಿವೆ. ಇದರಿಂದ ಸಾರ್ವಜನಿಕ ಹಿತಾಸಕ್ತಿಯನ್ನು ಬಲಿ ಕೊಡುವಂತಾಗಿದೆ ಎಂದು ಆರೋಪಿಸಿದೆ.

ಇತ್ತೀಚೆಗಷ್ಟೇ ರಾಜ್ಯ ಸರ್ಕಾರವು ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಕಾಯ್ದೆ ಜಾರಿಗೊಳಿಸಲು ಮುಂದಾದ ಸಂದರ್ಭದಲ್ಲಿ ವೈದ್ಯರುಗಳು ಮುಷ್ಕರಕ್ಕಿಳಿದು ಸಾರ್ವಜನಿಕ ಆರೋಗ್ಯ ಸೇವಾ ವಲಯದಲ್ಲಿ ಅಲ್ಲೋಲ, ಕಲ್ಲೋಲ ಸೃಷ್ಟಿಸುವಂತೆ ಮಾಡಿದ್ದನ್ನು ಸ್ಮರಿಸಬಹುದು.